**ಶಾಲಾ ನಾಯಕತ್ವ: ಒಳಗೊಳ್ಳುವಿಕೆ**

| ಕನ್ನಡ |
|---|
| ತೊಡಗಿಕೊಳ್ಳುವಿಕೆಯ ಶಿಕ್ಷಣ ನಮ್ಮ ಸರ್ಕಾರದ ನಿಯಮವಾಗಿದೆ. ನಮ್ಮ ಶಾಲೆಯಲ್ಲಿ, ನಾವು ಯಾವುದೇ ಬೇಧಭಾವವಿಲ್ಲದೇ ಪ್ರತೀ ಮಗುವನ್ನೂ ಸೇರಿಸಿಕೊಳ್ಳುತ್ತೇವೆ.<br>ದಾಖಲಾತಿಯ ಸಮಯದಲ್ಲಿ ನಾವು  ಅವರನ್ನು ಪರೀಕ್ಷಿಸುವುದೂ ಇಲ್ಲ.<br>ವಿದ್ಯಾರ್ಥಿಯೊಬ್ಬ 8 ನೇ ತರಗತಿ ಉತ್ತೀರ್ಣನಾದ್ರೆ, ಮತ್ತು ಶಾಲೆಯಲ್ಲಿ ದಾಖಲಾಗಲು ಬಯಸಿದರೆ, ಅವರು ಯಾವುದೇ ಜಾತಿ ಅಥವಾ ವರ್ಗವಿರಲಿ ದಾಖಲಾತಿ ನೀಡಲಾಗುತ್ತದೆ.<br>ವಿಕಲಚೇತನ ಮಕ್ಕಳಿಗೂ ಸಮಾನ ಪ್ರಾಮುಖ್ಯತೆ ನೀಡಲಾಗುತ್ತದೆ.<br>ಸುಶೀಲ್ ಜುಲೈನಲ್ಲಿ ನಮ್ಮ ಶಾಲೆಗೆ ದಾಖಲಾದ 9 ನೇ ತರಗತಿ ವಿದ್ಯಾರ್ಥಿ.<br>ಅವನ ಆಲೋಚನೆಗಳು ಬಹಳ ಸ್ಪಷ್ಟವಾಗಿದೆ. ಅವನು ಯಾವುದೇ ವಸ್ತುವಿಷಯ ಅಥವಾ ಯಾವುದೇ ವಯಸ್ಸು ಅಥವಾ ತರಗತಿಯ ನಿರ್ದಿಷ್ಟ ಅಗತ್ಯಗಳನ್ನು ಎದುರಿಸಲು ಸಮರ್ಥನಾಗಿದ್ದಾನೆ.<br>ಅವನು ಇತರ ಮಕ್ಕಳಿಗಿಂತ ಚೆನ್ನಾಗಿ ಮಾಡುತ್ತಾನೆ. ನೀವು ನೋಡಿರುವಂತೆ, ಅವನಿಗೆ ಎರಡೂ ಕೈಗಳಿಲ್ಲ. ಅವನು ತನ್ನ ಪಾದದಿಂದ ಬರೆಯುತ್ತಾನೆ.<br>ಪಾದದಿಂದ ಬರೆಯಲು ಅವನು ಸರಿಯಾಗಿ ಸಮತೋಲನವನ್ನೂ ಸಾಧಿಸಬೇಕು. ಅವನು ನೆಲದ ಮೇಲೆ ಕುಳಿತು ಬರೆಯುತ್ತಾನೆ.<br>ವೈಯಕ್ತಿಕವಾಗಿ, ಅವನು ಚೆನ್ನಾಗಿ ಓದುತ್ತಾನೆ ಮತ್ತು ಅವನಿಗೆ ಸೂಕ್ತ ವಾತಾವರಣ ಕಲ್ಪಿಸುವುದು ನಮ್ಮ ಹೊಣೆಯಾಗಿದೆ.<br>ಅವನಿಗೆ ಶೈಕ್ಷಣಿಕ ವಾತಾವರಣ ನೀಡುವುದು ಮತ್ತು ಅವನು ಯಾವುದೇ ಸಮಸ್ಯೆ ಎದುರಿಸದಂತೆ ನೋಡಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ. |